ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿ ಎಂದು ನಾವೆಲ್ಲರೂ ಒತ್ತಾಯ ಮಾಡುತ್ತಿದ್ದೇವೆ. ನಾವು ಸರ್ಕಾರದಲ್ಲಿದ್ದಾಗ ಮಾಡದೇ ಇದ್ದಂಥ ಕೆಲಸವನ್ನು ನೀವು ಮಾಡಿ ಎಂದು ನಾನು ಹೇಳುತ್ತಿಲ್ಲ. ನಾವು ಎರಡು ಸಾರಿ ಮಾಡಿದ್ದೇವೆ. ಹೀಗೆ ಮಾಡುವುದರಿಂದ ರೈತನ ಮನಸ್ಸಿಗೆ ನೆಮ್ಮದಿ ಬರುತ್ತದೆ. ಮುಂದೆ ನಾನು ಬದುಕಬಹುದು, ನನ್ನ ಸಾಲದ ಭಾರವನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಕಿಂಚಿತ್ತಾದರೂ ನೆರವಾಗುತ್ತಿದೆ ಎಂದು ಅವನ ಮೇಲೆ ಸೈಕಲಾಜಿಕಲ್‌ಆಗಿ ಪರಿಣಾಮ ಬೀರುತ್ತದೆ. ಆ ಕಾರಣದಿಂದ, ರೈತರ ಸಾಲದ ಮೇಲಿರತಕ್ಕಂಥ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಬೇಕು ಎಂದು ನಾನು ತಮ್ಮಲ್ಲಿ ಆಗ್ರಹಪೂರ್ವಕವಾಗಿ ವಿನಂತಿಸುತ್ತಿದ್ದೇನೆ. ಇದು ಬಹಳ ಮುಖ್ಯವಾದ ವಿಚಾರ. ಇದಕ್ಕೆ ಉತ್ತರ ಕೊಡಬೇಕೆಂದು ಕೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ನಾಲ್ಕು ಜನ ವಿಷ ಕುಡಿದಿದ್ದು, ಮೂವರು ಸತ್ತಿದ್ದಾರೆ. ಆದ್ದರಿಂದ ಇದನ್ನು ನಾವು ಹೇಳಲೇಬೇಕಾಗುತ್ತದೆ. ಮತ್ತು ರಾಯಚೂರು ಜಿಲ್ಲೆಯ ಕೆಲವು ಕಡೆಗಳಲ್ಲಿ ರೈತರ ಮೇಲೆ ಹಾಕಿರುವ ಕೇಸ್‌ಗಳನ್ನು ಪರಿಶೀಲನೆ ಮಾಡುತ್ತೇವೆ ಎಂದು ಗೃಹಮಂತ್ರಿಗಳು ಹೇಳಿದ್ದಾರೆ. ಆ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಿ ಎಂದೂ ಸಹ ಮೊದಲೇ ಹೇಳಿದ್ದೇವೆ. ಇದ್ಯಾವುದಕ್ಕೂ ಉತ್ತರವಿಲ್ಲ. ಇದಕ್ಕೆ ನಾವು ಏನು ಹೇಳಬೇಕಾಗುತ್ತದೆ. ಇದನ್ನು ನಾವು ಪ್ರತಿಭಟಿಸಿ ಹೊರಗೆ ಹೋಗಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದಂತೆ, ಬಯವಿಟ್ಟು ಅದಕ್ಕೆ ಉತ್ತರ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಇದು ಮೇಲ್ಮನೆಗೆ ಹೋಗಿ ಅಲ್ಲಿ ಪಾಸ್ ಆಗಿ ಬರಬೇಕು. ಇನ್ನೆರಡು ತಿಂಗಳು ಬಿಟ್ಟು ಮತ್ತೆ ಬರುತ್ತದಲ್ಲಾ, ಆಗ ಕೇಳಿ, ಈಗ ಇಷ್ಟು ಸಾಕು.

ಶ್ರೀ ಸಿ. ಬೈರೇಗೌಡ : ಒಂದು ಸಾರಿಯಲ್ಲ, ಅನೇಕ ಸಾರಿ ನಾವು ಸರ್ಕಾರವನ್ನು ಒಲಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಈಗಲೂ ಹೇಳುತ್ತಿದ್ದೇವೆ. ಮಾನಸಿಕವಾದಂಥ ನೆಮ್ಮದಿಯಾದರೂ ರೈತರಿಗೆ ಸಿಗಲಿ ಎಂದು ಹೇಳುತ್ತಿದ್ದೇವೆ.

ಅಧ್ಯಕ್ಷರು : ಅದನ್ನು ಅವರೊಬ್ಬರೇ ಮಾಡುವುದಕ್ಕಾಗುವುದಿಲ್ಲ. ನೀವೆಲ್ಲರೂ ಸೇರಿ ಮಾಡಬೇಕಾಗುತ್ತದೆ. ಸರ್ಕಾರ, ವಿರೋಧ ಪಕ್ಷದವರು ಎಲ್ಲರೂ ಸೇರಿ ಅವರನ್ನು ಮಾನಸಿಕವಾಗಿ ತಯಾರು ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಸಂಯುಕ್ತ ಜನತಾ ದಳದ ಸದಸ್ಯರು ಬೈರೇಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ರೈತರ ಪರವಾದ ಸರ್ಕಾರ ಎಂದು ಹೇಳುತ್ತಾರೆ. ಇವರಿಗೆ ನಿಜವಾಗಿ ರೈತರ ಪರವಾಗಿ ಕಾಳಜಿ ಇದ್ದಿದ್ದರೆ ಬಡ್ಡಿ ಮನ್ನಾವನ್ನು ಘೋಷಣೆ ಮಾಡಬೇಕಾಗಿತ್ತು. ಉತ್ತರ ಕೊಡುವಾಗ ಅದನ್ನು ಹೇಳಬೇಕಾಗಿತ್ತು. ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ, ಮಧ್ಯಮಾವಧಿ ಸಾಲವನ್ನು ದೀರ್ಘಾವಾಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಹತ್ತು ಲಕ್ಷ ಜನ ಬಡವರಿಗೆ ನೀಡಿರುವ ಹಸಿರು ಕಾರ್ಡ್‌ನ್ನು ರದ್ದು ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಬಡವರ ಪರ ಇರುವ ಸರ್ಕಾರವೇ? ಇವುಗಳಿಗೆಲ್ಲಾ ಈ ಸರ್ಕಾರದಲ್ಲಿ ಉತ್ತರವಿಲ್ಲ. ಇದಕ್ಕೆ ಉತ್ತರ ಹೇಳಬೇಕು. ಸಾರಾಯಿ ದೊರೆಗಳಿಂದ ಬರಬೇಕಾದ ಬಾಕಿಯನ್ನು ವಸೂಲು ಮಾಡುವ ದೃಢ ಸಂಕಲ್ಪವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶೇ.21 ರಷ್ಟು ಹೆಚ್ಚಿಗೆ ಆಗಿದೆ ಎಂದು ಹೇಳಿದರು, ಕರಸಮಾಧಾನ ಯೋಜನೆ ಇನ್ನೂ ಲೀಗಲ್ ಆಗಿ ಫೈನಲೈಸ್ ಆಗಿಲ್ಲ ಎಂದು ಹೇಳಿದರು. ಆದರೂ ಪದೇಪದೇ ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ವಸತಿ ಯೋಜನೆಯಲ್ಲಿ ಬಾಕಿ ಇರತಕ್ಕಂಥ ಹಣವನ್ನು ಇನ್ನೂ ಕೊಟ್ಟಿಲ್ಲ. ನನ್ನ ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯಿತಿ ಕಛೇರಿಯನ್ನು ಮುತ್ತಿಗೆ ಹಾಕಿದ್ದಾರೆ. ಬಡವರ ಪರವಾಗಿರತಕ್ಕಂಥ ಈ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಕಟಣೆ ಮಾಡುತ್ತಾರೆಂದು ನಾವು ತಿಳಿದಿದ್ದೆವು. ಇದ್ಯಾವುದರ ಬಗ್ಗೆ ಸುಳಿವೂ ಕೂಡ ಇಲ್ಲ. ರೈತರ ವಿರೋಧಿಯಾಗಿರತಕ್ಕಂಥ ಬಜೆಟ್ ಇದು. ಅದರ ಬಗ್ಗೆ ಸರಿಯಾದಂಥ ಕ್ಲಾರಿಫಿಕೇಷನ್ ಅನ್ನು ಅವರು ಹೇಳಲಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳಿಗೆ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಸಮಗ್ರವಾಗಿ ಉತ್ತರ ಕೊಡಲು ಸರ್ಕಾರಕ್ಕೆ ಮನಸ್ಸಿಲ್ಲ. ಬಡವರ ವಿರೋಧಿಯಾಗಿದ್ದುಕೊಂಡು, ಸದಸ್ಯರುಗಳಿಗೆ ಉತ್ತರ ಕೊಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಉತ್ತರ ಕೊಡುವಂಥ ಸೌಜನ್ಯ ಕೂಡ ಈ ಸರ್ಕಾರಕ್ಕೆ ಇಲ್ಲ. ನಿಮ್ಮ ಈ ನೀತಿ, ರೈತ ವಿರೋಧಿ ನೀತಿ, ಸರ್ಕಾರಕ್ಕೆ ಲಿಕ್ಕರ್ ಲಾಬಿಗೆ ಮಣಿದಿದೆ, ಅವರಿಂದ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವ ವ್ಯವಸ್ಥೆ ನಡೆದಿಲ್ಲ, ನಿಮ್ಮ ಬಜೆಟ್ ರೈತ ವಿರೋಧಿ ಬಜೆಟ್, ಬಿಯರ್‌ಗಳನ್ನು ಅಂಗಡಿಗಳಲ್ಲಿ ಮಾತ್ರವಲ್ಲ, ವಿಧಾನಸೌಧದ ಲಾಂಜ್‌ನಲ್ಲಿ ಮಾರಾಟ ಮಾಡಿ. ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಡಿ.ವಿ. ಸದಾನಂದಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಚೆನ್ನಿಗಪ್ಪನವರೇ, ಕ್ಲಾರಿಫಿಕೇಷನ್ ಕೇಳಿ. ತಮ್ಮದೇ ಕೊನೆಯದು.

ಶ್ರೀ ಸಿ. ಚೆನ್ನಿಗಪ್ಪ : ಇವತ್ತು ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿ ಅನೇಕ ವಿಚಾರಗಳಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟು ರೈತರಿಗೆ ಅನುಕೂಲವಾಗುವ ಹಾಗೆ ಮಾಡಿದ್ದಾರೆ. ನಾನು ಒಂದು ವಿಚಾರವನ್ನು ಹೇಳುವುದು ಏನೆಂದರೆ, ರೈತರ ಹೊಲ ಮತ್ತು ರೈತರ ರಸ್ತೆಗಳ ವಿಚಾರದಲ್ಲಿ ಶೇ.60-40 ಎಂದು ಮಾಡಿದ್ದಾರೆ. ಅದನ್ನು ಶೇ.90 ರಷ್ಟು ಮಾಡಿದರೆ